**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

CC No.:-4177/2023

C.W.:-9

P.W.:-6

| | |
|---|---|
| ಸಾಕ್ಷಿದಾರನ ಹೆಸರು | ಸಿದ್ದಪ್ಪ ನಾಯಿಕ |
| ತಂದೆಯ ಹೆಸರು | ದತ್ತು |
| ವಯಸ್ಸು | 51 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ನನದಿವಾಡಿ |

ಸಾಕ್ಷಿಗೆ ಈ ದಿನ ದಿಃ 23-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತುಸಾಕ್ಷಿಗೆ ಮರಾಠಿ ಭಾಷೆ ಬಿಟ್ಟು ಬೇರೆ ಭಾಷೆ ಬರದ ಕಾರಣ ಶ್ರೀ ಸಿ ಎಂ ಕೆ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 1 ಮತ್ತು 10 ರಿಂದ 13 ರವರು ಪರಿಚಯ.

ದಿಃ18.03.2023 ರಂದು ಬೆಳಗ್ಗೆ 10.30 ಗಂಟೆಗೆ ಯಕ್ಸಂಬಾ ಚಿಕ್ಕೋಡಿ ರಸ್ತೆಯ ಮೇಲೆ ಬಾಳಾಸಾಹೇಬ ಇವರ ಜಮೀನು ಹತ್ತಿರ ನಾನು ಹೋಗುತ್ತಿರುವಾಗ ಚಾಸಾ 10 ರವರು ಬಿದಿದ್ದರು. ನಾನು ಅವರಿಗೆ ಕೇಳಲಾಗಿ ಆರೋಪಿತರು ಎಲ್ಲರೂ ನನಗೆ ಹೊಡೆದು ಉಂಡಿಚಾ ರಾಂಡಿಚಾ ಊರಿನಲ್ಲಿ ಸ್ಮಶಾನ ಜಮೀನು ಕುರಿತು ಏನ ಲೀಡರ್ಕಿ ಮಾಡುತ್ತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ರಾಡ್‌ದಿಂದ ತಲೆಗೆ ಹೊಡೆದು, ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿನ್ನ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದು ಚಾಸಾ 10 ರವರು ತಿಳಿಸಿದರು. ಸದರಿ ವಿಷಯವನ್ನು ತನ್ನ ಮನೆಯಲ್ಲಿ ಚಾಸಾ 1 ರವರಿಗೆ ತಿಳಿಸಲು ನನಗೆ ಚಾಸಾ 10 ರವರು ಹೇಳಿದ್ದರಿಂದ ನಾನು ಚಾಸಾ 1 ರವರಿಗೆ ಹೇಳಿರುತ್ತೇನೆ. ನಂತರ ಘಟನಾ ಸ್ಥಳಕ್ಕೆ ಚಾಸಾ 1,11 ರಿಂದ 13 ರವರು ಬಂದು ಚಾಸಾ 1 ರವರಿಗೆ ವಿಚಾರಿಸಿದಾಗ ಆರೋಪಿತರು ಎಲ್ಲರೂ ಹೊಡೆದಿದ್ದರಿಂದ ನಾನು ಬೆಸುದ್ದಿಯಾಗಿ ಬಿದ್ದಿರುತ್ತೇನೆ ಅದರಲ್ಲಿ 4 ನೇ ಆರೋಪಿ ನನಗೆ ರಾಡ್‌ದಿಂದ ತಲೆಗೆ ಹೊಡೆರುತ್ತಾನೆ ಎಂದು ತಿಳಿಸಿದರು.

ತಲೆಗೆ ಹೊಡೆದಿದ್ದರಿಂದ ಚಾಸಾ 10 ರವರ ತಲೆಯಿಂದ ರಕ್ತ ಸ್ರಾವ ಆಗಿ ಗಾಯವಾಗಿತ್ತು. ಚಾಸಾ 10 ರವರು ತಾನು ರಾಶಿ ಮಶೀನ ನೋಡಲು ಯಕ್ಸಂಬಾಕ್ಕೆ ದ್ವಿಚಕ್ರವಾಹನದ ಮೇಲೆ ಹೋಗುತ್ತಿದ್ದಾಗ ಸದರಿ ಘಟನೆ ಆಗಿರುತ್ತದೆ ಎಂದು ತಿಳಿಸಿದರು. ನಂತರ ಚಾಸಾ 10 ರವರನ್ನು ಚಾಸಾ 1 ಮತ್ತು 11 ರವರು ಸದಲಗಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಅಲ್ಲಿಂದ ಹೆಚ್ಚಿನ ಉಪಚಾರಕ್ಕಾಗಿ ಚಿಕ್ಕೋಡಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮುಂದೆ ಹೆಚ್ಚಿ ನ ಉಪಚಾರಕ್ಕಾಗಿ ನಿಪ್ಪಾಣಿಯ ನಿರ್ಮಲೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ವಿಷಯದ ಕುರಿತು ಚಾಸಾ 1 ರವರು ಪೊಲೀಸರಿಗೆ ಫಿರ್ಯಾದಿಯನ್ನು ನೀಡಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಆ ದಿನ ಕೃತ್ಯಕ್ಕೆ ಬಳಸಿರುವ ರಾಡ್ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ. ಚಾಸಾ 10 ರವರ ವಾಹನ ಸಂಖ್ಯೆಕೆ ಎ 23 ಎಸ್ 6881 ಆಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಸಅ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅವರ ವಾದನ್ನು ಆಲಿಸಿ ಪಾಟೀ ಸವಾಲು ಮಾಡಲು ಸಸಅ ರವರಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ಶಂಕರ ಈಶ್ವರ ಯಕ್ಸಂಬೆ, ಅರ್ಜುನ ಈಶ್ವರ ಯಕ್ಸಂಬೆ ,ನಿತೀನ್ ಶಂಕರ ಯಕ್ಸಂಬೆ, ಪುಂಡಲೀಕ ಅರ್ಜುನ ಯಕ್ಸಂಬೆ ಇವರೆಲ್ಲರೂ ಸೇರಿ ಚಾಸಾ 10 ರವರಿಗೆ ಹೊಡೆಯುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಹೊಲದಲ್ಲಿ ಕೆಲಸ ಮಾಡುತ್ತಿದ್ದೆ ಸದರಿ ಜಗಳವನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಊರಿನಿಂದ ಬರುತ್ತಿದ್ದೆ. ಜಗಳವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. 1 ರಿಂದ 3 ನೇ ಆರೋಪಿತರು ಚಾಸಾ 10 ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಚಾಸಾ 10 ರವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

ನಾನು 10 ನೇ ತರಗತಿಯ ವರೆಗೆ ಓದಿರುತ್ತೇನೆ. ನಾನು ಕನ್ನಡ ವಿಷಯವನ್ನು ಓದಿರುತ್ತೇನೆ. ಚಾಸಾ 1 ಮತ್ತು 10 ರವರು ನನಗೆ ಸಂಬಂಧಿಕರು ಆಗಬೇಕು. ಆರೋಪಿತರ

ಮತ್ತು ಚಾಸಾ 1 ರವರ ಮಧ್ಯೆ ರುದ್ರಬೂಮಿ ರಸ್ತೆಯ ಕುರಿತು ಜಗಳ ಇತ್ತು ಎಂದರೆ ಸರಿಯಲ್ಲ. ಸದರಿ ಜಗಳ ಇರುವುದರಿಂದ ಅವರು ಮಧ್ಯೆ ವೈಮನ್ಸು ಇತ್ತು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿ ಅರದಲ್ಲಿ "ಈ ಎರಡು ಮನೆತನದವರಿಗೂ ನನದಿವಾಡಿ ಗ್ರಾಮದಲ್ಲಿನ ರುದ್ರಭೂಮಿಗೆ ಹೋಗುವ ದಾರಿಯ ಸಲುವಾಗಿ ಮೊದಲಿನಿಂದ ತಂಟೆ ತಕರಾರು ನಡೆಯುತ್ತಾ ಬಂದಿರುತ್ತವೆ. ಇದರಿಂದ ವೈರತ್ವ ಕೂಡಾ ಬೆಳೆದಿತ್ತು " ಎಂದು ಕೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೊಲೀಸರು ತಪ್ಪಾಗಿ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಡಿ 2 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ದಿನಾಂಕ 21.03.2023 ರಂದು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ, ಆದರೆ ನನಗೆ ವಿಚಾರಿಸಿರುತ್ತಾರೆ.

ರುದ್ರಭೂಮಿಗೆ ಹೋಗಲು ಯಾವುದೇ ರಸ್ತೆ ಇರುವುದಿಲ್ಲ ಎಂದು ತಹಶೀಲ್ದಾರವರು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಯು ಮುಚ್ಚಿರುತ್ತದೆ ಎಂದರೆ ಸರಿ. ಚಾಸಾ 1,10 ಮತ್ತು ಮಾರುತಿ ಬಾಬು ನಾಯಿಕ, ಜ್ಯೋತಿಬಾ ಬಾಬು ನಾಯಿಕ, ಸುಖದೇವ ದೊಂಡಿಬಾ ನಾಯಿಕ ರವರು ಸೇರಿ ಪ್ರಸ್ತುತ ಪ್ರಕರಣದ 4 ನೇ ಆರೋಪಿಗೆ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂದು ಸದರಿಯವರ ಮೇಲೆ ಮಾನ್ಯ ಸತ್ರ ಜಿಲ್ಲಾ ನ್ಯಾಯಾಲಯದಲ್ಲಿ ಎಸ್ ಸಿ ನಂಬರ 5032/2024 ಎಂದು ಪ್ರಕರಣ ಚಾಲತಿಯಲ್ಲಿ ಇರುತ್ತದೆ ಎಂದರೆ ಸರಿ. ಅದೇ ದಿನ ಬೆಳಗ್ಗ 8.30 ಗಂಟೆಗೆ ಸದರಿ ವ್ಯಕ್ತಿಗಳು 4 ನೇ ಆರೋಪಿತನ ಜೊತೆ ರುದ್ರಭೂಮಿಯ ರಸ್ತೆ ಸಲುವಾಗಿ ಜಗಳ ಮಾಡಿ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸುವರ್ಣ ಮಾರುತಿ ನಾಯಿಕ ಇವರು ನಮ್ಮ ಸಂಬಂಧಿಕರು. ಸದರಿಯವರು ಆರೋಪಿತರ ವಿರುದ್ಧ ಪ್ರಕರಣ ದಾಖಲ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾನ್ಯ ಸತ್ರ ಜಿಲ್ಲಾ ನ್ಯಾಯಾಲಯದಲ್ಲಿ ಎಸ್ ಸಿ ನಂಬರ 5040/2024 ಎಂದು ಪ್ರಕರಣ ಚಾಲತಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ತಹಶೀಲ್ದಾರವರು ರುದ್ರಭೂಮಿಗೆ ಹೋಗಲು ದಾರಿ ಇರುವುದಿಲ್ಲ ಎಂದು ಆದೇಶ ಮಾಡಿದ್ದಕ್ಕೆ ಮತ್ತು ಆ ರಸ್ತೆಯು ಆರೋಪಿತರ ಜಮೀನಿನಲ್ಲಿ ಇರುತ್ತದೆ ಆದ್ದರಿಂದ ಆರೋಪಿತ ಮೇಲೆ ಸಿಟ್ಟಾಗಿ ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನೆಯಾದಾಗ ರಸ್ತೆಯ ಮೇಲೆ ನಾನು ಒಬ್ಬನೆ ಇದ್ದೆ. ಘಟನೆ ಸ್ಥಳದಲ್ಲಿ ರಕ್ತ ಬಿದ್ದಿರುತ್ತದೆ. ನಾನು ಚಾಸಾ 10 ರವರಿಗೆ ಎಬ್ಬಿಸಿ ಕೂಡ್ರಿಸಿರುತ್ತನೆ. ಆ ಕಾಲಕ್ಕೆ ನನ್ನ ಬಟ್ಟೆಗೆ ಯಾವುದೆ ರಕ್ತ ಹತ್ತಿರುವುದಿಲ್ಲ. ನಾನು ಚಾಸಾ 11 ರವರು ಪೊಲೀಸ ಠಾಣೆಗೆ ಹೋಗಿ

ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ನಾವು ಫಿರ್ಯಾದಿ ನೀಡಿದಾಗ ಪೊಲೀಸರು ಮೊದಲು ಉಪಚಾರ ಪಡೆದುಕೊಂಡು ನಂತರ ಫಿರ್ಯಾದಿ ನೀಡಲು ತಿಳಿಸಿದರು. ನಾವು ಆಸ್ಪತ್ರೆಗೆ ಹೋಗಿದಾಗ ಸದರಿ ವಿಷಯವನ್ನು ವೈದ್ಯರಿಗೆ ತಿಳಿಸಿರುತ್ತೇವೆ. ಅಲ್ಲಿ ಪೊಲೀಸರು ಬಂದಿದ್ದರು ಅವರಿಗೂ ಸಹ ವಿಷಯವನ್ನು ತಿಳಿಸಿರುತ್ತೇನೆ. ಚಾಸಾ 10 ರವರಿಗೆ ಹೆಚ್ಚಿ ನ ಉಪಚಾರಕ್ಕಾಗಿ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವೈದ್ಯರು ಯಾವುದೇ ಲಿಖಿಯಲ್ಲಿ ಹೇಳಿರುವುದಿಲ್ಲ. ನಾನು ನಿರ್ಮಲೆ ಆಸ್ಪತ್ರೆ ಹೋಗಿರುವುದಿಲ್ಲ. ಚಾಸಾ 10 ರವರು ಸುಮಾರು 10–15 ದಿನ ಬೆಸುದ್ದಿಯಾಗಿದ್ದರು.

ಆರೋಪಿತರು ಚಾಸಾ 10 ರವರಿಗೆ ಯಾವುದೇ ತರಹದ ಅಡ್ಡ ಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ಕೈಯಿಂದ ಮತ್ತು ರಾಡ್‌ದಿಂದ ಹೊಡಿ ಬಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗದೆ ಇದ್ದರೂ ಸಹ ರುದ್ರಭೂಮಿಗೆ ದಾರಿ ಪಡೆಯುವ ಉದ್ದೇಶದಿಂದ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ ಚಾಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

(ಸಾಕ್ಷಿಗೆ ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಮರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥಾವತ್ತಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ